## ಫೋಟೊ ಖುಷಿ

ಐಪ್ಯಾಡ್ ಹಾಗೂ ಐಫೋನ್‌ಗಳಿಗೆ ಫೋಟೊಜಾಯ್ ಪ್ಲಸ್ ಎಂಬ ಹೊಸ ಅಪ್ಲಿಕೇಶನ್ ಬಂದಿದ್ದು ಬಳಕೆದಾರರು ತಮ್ಮ ಮೊಬೈಲ್‌ನಲ್ಲಿ ಡಿಜಿಟಲ್ ಫೋಟೊಗ್ರಾಫ್‌ಗಳನ್ನು ಹೊಸ ರೀತಿಯಲ್ಲಿ ಹಂಚಿಕೊಂಡು ಖುಷಿಪಡಬಹುದು.

ನಿಮ್ಮ ಮೊಬೈಲ್‌ನಲ್ಲಿ ಇಟ್ಟುಕೊಂಡಿರುವ ನಿಮ್ಮ ಫೋಟೊ ಜೊತೆಗೆ ಫೇಸ್ ಬುಕ್‌ನಲ್ಲಿರುವ ನಿಮ್ಮ ಕುಟುಂಬದ, ಸ್ನೇಹಿತರ ಫೋಟೊಗಳನ್ನು ಉನ್ನತ ಗುಣಮಟ್ಟದ 3ಡಿ ತಂತ್ರಜ್ಞಾನದೊಂದಿಗೆ ಸೇರಿಸುತ್ತದೆ. ಈಗಾಗಲೇ 2.2 ದಶಲಕ್ಷ ಮಂದಿ ಈ ಅಪ್ಲಿಕೇಶನ್ ಅನ್ನು ತಮ್ಮ ಕಂಪ್ಯೂಟರ್‌ಗೆ ಡೌನ್ ಲೌಡ್ ಮಾಡಿಕೊಂಡಿದ್ದು ಇದು ಆ್ಯಪಲ್ ಉಪಕರಣದ ಮೂಲಕ ಐಪ್ಯಾಡ್ ಅಥವಾ ಐಫೋನ್‌ಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಹಳೆಯ ಫೋಟೊ ನೆನಪಿಗೆ ಬಂದಾಕ್ಷಣ ಬಳಕೆದಾರರು ತಮ್ಮ ಫೋನ್ ಮೂಲಕ ಫೇಸ್‌ಬುಕ್‌ನಲ್ಲಿನ ಫೋಟೊ ಬಗ್ಗೆ ಅಭಿಪ್ರಾಯ ಪೋಸ್ಟ್ ಮಾಡಬಹುದು.




## ಪ್ಲೇಯರ್‌ನಲ್ಲಿ ಕರೋಕೆ




ನಿಮಗೆ ಇಷ್ಟವಾದ ಗೀತೆಯ ಸಾಲುಗಳು ನೆನಪಾಗುತ್ತಿಲ್ಲವಾ? ತೊಂದರೆ ಇಲ್ಲ, ಹೊಸ ಐಫೋನ್ ಅಪ್ಲಿಕೇಶನ್ ನಿಮ್ಮ ನೆರವಿಗೆ ಬಂದಿದೆ. ಕಳೆದ ವಾರ ಬಿಡುಗಡೆಯಾದ ಮ್ಯೂಸಿಕ್ ಪ್ಲೇಯರ್ ಶಾಝಾಮ್ ಪ್ಲೇಯರ್ ಹಾಡುಗಳನ್ನು ಬಿತ್ತರಿಸುವುದರ ಜೊತೆಗೆ ಗೀತೆಯ ಸಾಲುಗಳನ್ನೂ ಫೋನಿನ ಪರದೆ ಮೇಲೆ ತೋರಿಸುತ್ತದೆ. ಈ ಅಪ್ಲಿಕೇಶನ್ ಹಾಡಿನ ವಿಡಿಯೊ, ಆಲ್ಬಂ ವಿಮರ್ಶೆ, ಗಾಯಕನ ಕಾರ್ಯಕ್ರಮದ ದಿನವನ್ನೂ ತೋರಿಸುತ್ತದೆ.

ಶಾಝಾಮ್ ಸ್ಮಾರ್ಟ್‌ಫೋನ್‌ನ ಒಳಗಡೆ ಇರುವ ಮೈಕ್ರೋಫೋನ್ ಬಳಸಿಕೊಂಡು ಕೋಣೆಯಲ್ಲಿ ನುಡಿಸಿದ ಹಾಡಿನ ಒಂದು ಶಬ್ದ ಕೇಳಿಸಿಕೊಂಡು ಆ ಹಾಡಿನ ಶೀರ್ಷಿಕೆ ಮತ್ತು ಗಾಯಕನ ಹೆಸರನ್ನು ಹೇಳುವ ತಂತ್ರಜ್ಞಾನ ಹೊಂದಿದೆ. ಇದನ್ನು ಅಮೆರಿಕಾದಲ್ಲಿ 6 ಕೋಟಿ ಹಾಗೂ ಜಗತ್ತಿನ ಇತರೆಡೆ 17.5 ಕೋಟಿ ಜನರು ಬಳಸುತ್ತಿದ್ದಾರೆ. ಸುಮಾರು 50 ಸಾವಿರ ಹಾಡುಗಳ ಸಾಲುಗಳನ್ನು ನೋಡಬಹುದು. ಪ್ರತಿ ವಾರವೂ ಒಂದು ಸಾವಿರ ಹೊಸ ಹಾಡುಗಳನ್ನು ಸೇರಿಸಲಾಗುತ್ತಿದೆ.

## ಯೂನಿವರ್ಸಲ್ ರಿಮೋಟ್ ಕಂಟ್ರೋಲ್

ಸ್ಮಾರ್ಟ್ ಟೀವಿ ಉತ್ಪನ್ನಗಳ ಅಭಿವೃದ್ಧಿ ಮೇಲೆ ಕಣ್ಣಿಟ್ಟಿರುವ ಆ್ಯಪಲ್ ವಿವಿಧ ಗ್ಯಾಜೆಟ್‌ಗಳನ್ನು ದೂರದಿಂದಲೇ ನಿಯಂತ್ರಿಸುವ 'ಯೂನಿವರ್ಸಲ್ ಟಚ್‌ಸ್ಕ್ರೀನ್ ರಿಮೋಟ್ ಕಂಟ್ರೋಲ್' ತಯಾರಿಕೆಗೆ ಕೈ ಹಾಕಿದೆ.

ಈ ರಿಮೋಟ್ ಕಂಟ್ರೋಲ್ ಟೀವಿ, ವಿಡಿಯೊ ಟೇಪ್ ಪ್ಲೇಯರ್, ಡಿವಿಡಿ ಪ್ಲೇಯರ್, ಸ್ಟೀರಿಯೊ, ಕಂಪ್ಯೂಟರ್‌ಗಳನ್ನು ನಿಯಂತ್ರಿಸುವ ಸಾಮರ್ಥ್ಯ ಹೊಂದಿದ್ದು ತಯಾರಿಕೆ ಹಂತದಲ್ಲಿದೆ. ಇದಕ್ಕೆ ವಿವಿಧ ರಿಮೋಟ್ ಕಂಟ್ರೋಲ್‌ಗಳ ಕಾರ್ಯನಿರ್ವಹಣೆ ಅನುಕರಣೆ ಮಾಡಲು ತರಬೇತಿ ನೀಡಲಾಗುತ್ತದೆ. ನಂತರ ಪ್ರತಿಯೊಂದೂ ಉಪಕರಣಗಳನ್ನು ನಿಯಂತ್ರಿಸುವ ಸಾಮರ್ಥ್ಯ ತುಂಬಲಾಗುತ್ತದೆ ಎಂಬುದು ಕಂಪೆನಿಯ ವಿವರಣೆ.

ಈ ಉಪಕರಣ ಟಚ್‌ಸ್ಕ್ರೀನ್ ಹೊಂದಿದ್ದು ವಿವಿಧ ಉಪಕರಣಗಳನ್ನು ನಿಯಂತ್ರಿಸುವ ಶೋಧಕ ಫಲಕ ಹೊಂದಿದೆ. ಆ್ಯಪಲ್‌ನ ಈ ನಡೆ ಅದು ಪೂರ್ಣ ಪ್ರಮಾಣದ ಸ್ಮಾರ್ಟ್ ಟೀವಿ ತಯಾರಿಕೆಗೆ ಕೈ ಹಾಕಲಿದೆ ಎಂಬ ಸಂದೇಶವನ್ನು ರವಾನಿಸಿದಂತಾಗಿದೆ ಎಂಬ ಮಾತು ಗ್ಯಾಜೆಟ್ ಕಂಪೆನಿಗಳ ನಡುವೆ ಹರಿದಾಡುತ್ತಿದೆ.

## ಎಚ್‌ಆರ್ ನಿರ್ವಹಣೆ ಅಪ್ಲಿಕೇಶನ್

ಮಾನವ ಸಂಪನ್ಮೂಲ (ಎಚ್‌ಆರ್) ನಿರ್ವಹಿಸಲು ಕಂಪೆನಿಗಳಿಗೆ ನೆರವಾಗುವ 'ವಿಪ್ರೊ ಸ್ಪ್ರಿಂಟ್‌ಎಚ್‌ಆರ್' ಅಪ್ಲಿಕೇಶನ್ ಅನ್ನು ವಿಪ್ರೊ ಟೆಕ್ನಾಲಜೀಸ್ ಬಿಡುಗಡೆ ಮಾಡಿದೆ.

ಮಾನವ ಸಂಪನ್ಮೂಲ ನಿರ್ವಹಣೆ ಪ್ರಕ್ರಿಯೆಗಳನ್ನು ಇದು ಒರ್‍ಯಾಕಲ್‌ಗೆ ವರ್ಗಾವಣೆ ಮಾಡುವ ಸಾಮರ್ಥ್ಯ ಹೊಂದಿದೆ. ಪ್ರತಿಭೆ ನಿರ್ವಹಣೆ, ಲಾಭ ನಿರ್ವಹಣೆ ಹಾಗೂ ಒಟ್ಟು ಮಾನವ ಸಂಪನ್ಮೂಲ ಆಡಳಿತ ನಿರ್ವಹಣೆಯನ್ನು ಈ ಅಪ್ಲಿಕೇಶನ್ ಅಳವಡಿಸಿಕೊಳ್ಳುವುದರಿಂದ ಮಾಡಬಹುದು. ಇದರಿಂದಾಗಿ ಖರ್ಚು ಕಡಿಮೆಯಾಗುವುದಲ್ಲದೇ, ಈ ವಿಭಾಗದಲ್ಲಿ ಬಳಕೆಯಾಗುವ ಉದ್ಯೋಗಿಗಳ ಸಂಖ್ಯೆಯನ್ನೂ ಕಡಿಮೆ ಮಾಡಬಹುದು ಎನ್ನುತ್ತಾರೆ ವಿಪ್ರೊ ಉಪಾಧ್ಯಕ್ಷ ರಾಜಾ ಉಕಿಲ್.

ಈ ಉತ್ಪನ್ನವನ್ನು ಬೇಡಿಕೆಯ ಮೇರೆಗೆ 'ಸಾಫ್ಟ್‌ವೇರ್ ಆ್ಯಸ್ ಎ ಸರ್ವೀಸ್' ಮಾದರಿಯಲ್ಲಿ ಪೂರೈಸಲಾಗುವುದು.

## ಫೇಸ್‌ಬುಕ್‌ಗೆ 'ಆ್ಯಂಗ್ರಿ ಬರ್ಡ್ಸ್'

ಜನಪ್ರಿಯ ಮೊಬೈಲ್ ಗೇಮ್ 'ಆ್ಯಂಗ್ರಿ ಬರ್ಡ್ಸ್' ಸಾಮಾಜಿಕ ಜಾಲತಾಣ ಫೇಸ್ ಬುಕ್‌ನಲ್ಲೂ ಫೆಬ್ರುವರಿ 14ರಿಂದ ಲಭ್ಯವಾಗಲಿದೆ. ಇದು ಈ ಗೇಮ್‌ನ ಅಭಿಮಾನಿಗಳಲ್ಲಿ ಪುಳಕ ಮೂಡಿಸಿದೆ.

ಫೇಸ್‌ಬುಕ್‌ನ ಎಲ್ಲಾ ಬಳಕೆದಾರರಿಗೆ ಇದು ಉಚಿತವಾದರೂ ಮೈಟಿ ಈಗಲ್, ದುಪ್ಪಟ್ಟು ಗಾತ್ರದ ಹಕ್ಕಿ, ಅರ್ಥ್‌ಕ್ವೇಕ್ ವೆಪನ್ ಮೊದಲಾದವುಗಳನ್ನು ಮೇಲ್ದರ್ಜೆಗೇರಿಸ ಬಯಸುವವರು ಹೆಚ್ಚುವರಿ ಹಣ ನೀಡಬೇಕಾಗುತ್ತದೆ.

## ಗೂಗ್ಲ್‌ನಿಂದ ಅವಗಢ ಎಚ್ಚರಿಕೆ

ತಂತ್ರಜ್ಞಾನದ ಅಗಾಧ ಶಕ್ತಿಗೆ ಹ್ಯಾಟ್ಸಾಫ್. ಗೂಗ್ಲ್ ಮ್ಯಾಪ್ಸ್ ನೈಸರ್ಗಿಕ ವಿಕೋಪದ ಸಂದರ್ಭದಲ್ಲಿ ಎಚ್ಚರಿಕೆ ಕರೆಗಂಟೆ ನೀಡುವ ತಂತ್ರಜ್ಞಾನ ರೂಪಿಸಿದ್ದು ಈಗಾಗಲೇ ಅಮೆರಿಕಾದಲ್ಲಿ ಬಳಕೆಯಲ್ಲಿದೆ. ಅದು ನೀವಿರುವ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರವಾಹ, ಚಂಡಮಾರುತ, ಭೂಕಂಪಗಳೇನಾದರೂ ಸಂಭವಿಸಿದರೆ ಎಚ್ಚರಿಕೆ ನೀಡುತ್ತದೆ. ಎಷ್ಟು ಗಂಟೆಗೆ ಸಂಭವಿಸಿದೆ, ಅಪಾಯದ ಅವಧಿ ಎಷ್ಟು ಎಂಬುದನ್ನು ಕೂಡಾ ತಿಳಿಸುತ್ತದೆ.

■ ಎಸ್.ತುಂಬೆ